# ಚರ್ಮವ್ಯಾಧಿ

# ವಾರ್ಟ್ಸ್



ಹೆಣ್ಣು–ಗಂಡು ಎಂಬ ಭೇದವಿಲ್ಲದೆ ಎಲ್ಲರನ್ನೂ ಕಾಡುವ ವಾರ್ಟ್ಸ್ ನೋವಿರದ ಒಂದು ಚರ್ಮವ್ಯಾಧಿ. ಮುಖ ಮಾತ್ರವಲ್ಲದೆ ಕತ್ತು, ಕಂಕುಳಲ್ಲಿ, ಹೆಚ್ಚು ಬೆವರುವ ಜಾಗದಲ್ಲಿ, ಹೆಚ್ಚು ದಪ್ಪ ಇರುವವರಿಗೆ ವಾರ್ಟ್ಸ್ ಬೆಳೆಯುತ್ತದೆ. ಇದು ನೋವಿನಿಂದ ಕೂಡಿರದಿದ್ದರೂ ನೋಡಲು ಸಹನೀಯವಲ್ಲ.

★ ಉಮಾ ವೇಣೂರು

ವಯಸ್ಸು ಸುಮಾರು ಇಪ್ಪತ್ತರ ಆಜೂಬಾಜು. ಮುದ್ದಾದ ಮುಖ, ಆಕರ್ಷಕ ಬಣ್ಣ, ಹೊಳಪುಳ್ಳ ಕಣ್ಣು... ಇವೆಲ್ಲವೂ ಆಕೆ 'ಸುಂದರಿ' ಎಂಬುದನ್ನು ಸಾಬೀತುಪಡಿಸಿತ್ತು. ಇಷ್ಟು ಚಂದದ ಮುಖಕ್ಕೆ ಕಪ್ಪುಚುಕ್ಕೆ ಎಂಬಂತೆ ಮುಖದ ಅಂಚಿನಲ್ಲಿ, ಕತ್ತಿನ ಭಾಗದಲ್ಲಿ, ಕಣ್ಣಿನ ಬದಿಯಲ್ಲಿ ಅಲ್ಲಲ್ಲಿ ಬೆಳೆದಿದ್ದ ವಾರ್ಟ್ಸ್ (ಎಕ್ಸ್‌ಟ್ರಾ ಸ್ಕಿನ್) ಆಕೆಗೆ ತನ್ನ ಆರೋಗ್ಯದ ಬಗ್ಗೆ, ಸೌಂದರ್ಯದ ಬಗ್ಗೆ ಕೀಳರಿಮೆ ಮೂಡುವಂತೆ ಮಾಡಿತ್ತು.

ಹೆಣ್ಣು–ಗಂಡು ಎಂಬ ಭೇದವಿಲ್ಲದೆ ಎಲ್ಲರನ್ನೂ ಕಾಡುವ ವಾರ್ಟ್ಸ್ ನೋವಿರದ ಒಂದು ಚರ್ಮವ್ಯಾಧಿ. ಸಂಪೂರ್ಣ ಆರೋಗ್ಯವಂತರಲ್ಲಿ ವಾರ್ಟ್ಸ್ ಇರದೇ ಇರುವುದು ಮತ್ತು ಈ ಚರ್ಮವ್ಯಾಧಿಗೆ ಚಿಕಿತ್ಸೆ ಇರುವ ಕಾರಣ ವಾರ್ಟ್ಸ್ ಇರುವವರನ್ನು ಆರೋಗ್ಯವಂತರ ಸಾಲಿಗೆ ಸೇರಿಸುವುದು ಸ್ವಲ್ಪ ಕಷ್ಟ. ವಾರ್ಟ್ಸ್‌ನಿಂದ ವ್ಯಕ್ತಿಯ ಒಟ್ಟು ಸೌಂದರ್ಯ ಮತ್ತು ಆರೋಗ್ಯಕ್ಕೆ ಧಕ್ಕೆಯಾಗುತ್ತದೆ. ಅಂದದ ಮುಖ ಅಂದಗೆಡುತ್ತದೆ. ಮುಖ ಮಾತ್ರವಲ್ಲ, ಕತ್ತು, ಕಂಕುಳಲ್ಲಿ, ಹೆಚ್ಚು ಬೆವರುವ ಜಾಗದಲ್ಲಿ, ಹೆಚ್ಚು ದಪ್ಪ ಇರುವವರಿಗೆ ವಾರ್ಟ್ಸ್ ಬೆಳೆಯುತ್ತದೆ. ಇದು ನೋವಿನಿಂದ ಕೂಡಿರದಿದ್ದರೂ ನೋಡಲು ಸಹನೀಯವಾಗಿ ರುವುದಿಲ್ಲ. ಹೀಗಾಗಿ ಕಚೇರಿಗಳಲ್ಲಿ, ಶಾಲೆ–ಕಾಲೇಜು, ಸಾರ್ವಜನಿಕ ಸ್ಥಳಗಳಲ್ಲಿ ಓಡಾಡಲು, ಕೆಲಸ ಮಾಡಲು ಕೀಳರಿಮೆ ಉಂಟಾಗುತ್ತದೆ.

ಮುಖದ ಮೇಲೆ, ಕುತ್ತಿಗೆ, ಕೈಕಾಲುಗಳ ಮೇಲೆ ಕಲೆ, ಗುಳ್ಳೆ, ಮೊಡವೆ, ಅಗಲವಾದ ಕರಿ ಮಚ್ಚೆ ಏನೇ ಮೂಡಿದರೂ ಅದರಿಂದ ಚರ್ಮಕ್ಕೆ ಧಕ್ಕೆಯಾಗು ತ್ತದೆ. ಇದಕ್ಕೆ ವಾರ್ಟ್ಸ್ ಎಂಬುದು ಹೊಸ ಸೇರ್ಪಡೆ.

### ವಾರ್ಟ್ಸ್‌ಗೆ ಕಾರಣವೇನು?

ಅನುವಂಶೀಯವಾಗಿ, ಕಲುಷಿತ ಪ್ರದೇಶದಲ್ಲಿ ಕೆಲಸ ಮಾಡುವುದು, ಶುಚಿಯಾಗಿ ಇರದೇ ಇರುವುದು, ಹೆಚ್ಚು ಬೆವರುವುದು, ಹೆಚ್ಚು ತೂಕ ಇರುವವರಿಗೆ, ಅಶುದ್ಧ ರಕ್ತ ದೇಹದಲ್ಲಿ ಸೇರಿಕೊಂಡಿರುವುದರಿಂದ ವಾರ್ಟ್ಸ್ ಹುಟ್ಟಿಕೊಳ್ಳುತ್ತದೆ. ಇದು ಬೇರೆಯವರಿಗೆ ಹರಡುವುದಿಲ್ಲ ಮತ್ತು ತಮ್ಮ ದೇಹದಲ್ಲೇ ಬೇರೆ ಜಾಗಕ್ಕೂ ಹರಡುವುದಿಲ್ಲ. ಸೋಂಕು ಕೂಡ ಆಗುವುದಿಲ್ಲ. ಇದನ್ನು ಆಯುರ್ವೇದ ಚಿಕಿತ್ಸೆಯಿಂದ, ಮಸಾಜ್‌ನಿಂದ ಸರಿಪಡಿಸಬಹುದು. ಬೇರೆ ಕಡೆ ಆಗದ ಹಾಗೆಯೂ ನೋಡಿಕೊಳ್ಳಬಹುದು ಎನ್ನುತ್ತಾರೆ ನಿಸರ್ಗ ಆಯುರ್ಧಾಮದಲ್ಲಿ ವೈದ್ಯೆಯಾಗಿರುವ ಡಾ. ಶಿಲ್ಪಾ ಹೆಗ್ಡೆ.

### ವಾರ್ಟ್ಸ್‌ನಲ್ಲಿ ಹಲವು ವಿಧ

ಹೆಚ್ಚುವರಿ ಚರ್ಮ ಬೆಳೆದ ಗಾತ್ರ, ಆಕಾರಗಳನ್ನು ಆಧರಿಸಿ ಬೇರೆ ಬೇರೆ ರೀತಿಯವು ಎಂದು ಚರ್ಮರೋಗ ತಜ್ಞರು ವಿಂಗಡಿಸುತ್ತಾರೆ. ಅವುಗಳಲ್ಲಿ ಪ್ರಮುಖವಾದವು ಎಂದರೆ

ಸಾಮಾನ್ಯ (ಕಾಮನ್) ವಾರ್ಟ್ಸ್: ಇದು ಸಾಮಾನ್ಯವಾಗಿ ಎದ್ದು ಕಾಣುವಂಥವು; ಕೈಗಳಲ್ಲಿ ಕಂಡುಬರುತ್ತವೆ. ಆದರೆ ದೇಹದ ಎಲ್ಲಿ ಬೇಕಾದರೂ ಬೆಳೆಯುವ ಸಾಧ್ಯತೆಗಳಿರುತ್ತವೆ.

ಫ್ಲ್ಯಾಟ್ ವಾರ್ಟ್ಸ್: ಚಿಕ್ಕದಾಗಿ, ಮೆದುವಾಗಿ ಇರುವ ಈ ಮಾದರಿಯ ವಾರ್ಟ್ಸ್ ಮುಖ, ಕುತ್ತಿಗೆ, ಕೈಕಾಲುಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ.

ಮೊಸಾಯಿಕ್ ವಾರ್ಟ್ಸ್: ಈ ತರದ ವಾರ್ಟ್ಸ್ ಕಾಲು ಮತ್ತು ಪಾದಗಳ ತಳದಲ್ಲಿ ಹುಟ್ಟುತ್ತವೆ. ಮುಖದಲ್ಲಿ ಕಾಣಿಸುವ ವಾರ್ಟ್ಸ್‌ಗೆ ಪ್ರಮುಖವಾಗಿ ಎಚ್‌ಪಿವಿ (ಹ್ಯೂಮನ್ ಪಪಿಲೋಮ ವೈರಸ್) ಕಾರಣ.

### ಚಿಕಿತ್ಸೆ ಏನು?

ವಾರ್ಟ್ಸ್ ಅನ್ನು ಸೂಕ್ತ ಚಿಕಿತ್ಸೆ ಮೂಲಕ ಸರಿಪಡಿಸಬಹುದು. ರಕ್ತ ಶುದ್ಧಿಗೆ ಔಷಧಿ, ಕ್ಲೆನ್ಸಿಂಗ್, ವಾಷಿಂಗ್ ಮಾಡಬೇಕು. ಬೇವಿನ ಅಂಶವಿರುವ ಸೋಪು ಬಳಸಿದರೆ ಪರಿಣಾಮಕಾರಿ. ರಕ್ತ ಶುದ್ಧಿಗೆ ಕಷಾಯ, ಮಾತ್ರೆ, ದೇಹದೊಳಗೆ ಶುದ್ಧಿ, ಆಹಾರ ಕ್ರಮ ಬದಲಾವಣೆ ಮಾಡಿದರೆ ಇದನ್ನು ತಡೆಗಟ್ಟಬಹುದು ಎನ್ನುತ್ತಾರೆ ಡಾ. ಶಿಲ್ಪಾ.

ಆಯುರ್ವೇದ ಚಿಕಿತ್ಸೆ ಪ್ರಕಾರ ಎಣ್ಣೆ ಮಸಾಜ್, ಸ್ಪೆಷಲ್ ಸ್ವೇದ (ಶಾಖ ಚಿಕಿತ್ಸೆ), ಔಷಧಿ ಲೇಪನ, ಕಷಾಯ ಸೇವನೆಯಿಂದ ಕೇವಲ ನಾಲ್ಕು ದಿನಗಳಲ್ಲೇ ವಾರ್ಟ್ಸ್ ಬಿದ್ದು ಹೋಗುತ್ತದೆ. 15 ದಿನಗಳಲ್ಲಿ ಕಲೆಗಳೂ ಉಳಿಯುವುದಿಲ್ಲ. ಒಮ್ಮೆ ಆದ ಜಾಗದಲ್ಲಿ ಮತ್ತೆ ವಾರ್ಟ್ಸ್ ಹುಟ್ಟಿಕೊಳ್ಳುವುದಿಲ್ಲ. ಮತ್ತೆ ಹೊಸದಾಗಿ ಬರದ ಹಾಗೆಯೂ ಚಿಕಿತ್ಸೆ ನೀಡುತ್ತೇವೆ ಎಂದು ವಿವರಿಸುತ್ತಾರೆ ಅವರು.

ಇನ್ನು ಹೆಚ್ಚಿನ ಕಡೆಗಳಲ್ಲಿ ವಾರ್ಟ್ಸ್ ಇರುವವರಿಗೆ ರಕ್ತ ಶುದ್ಧಿ (blood purification therapy) ಗೆ ವಿರೇಚನ, ಪಂಚಕರ್ಮ ಚಿಕಿತ್ಸೆ, ರಕ್ತ ಶೋಧಕ ತುಪ್ಪ, ಎಣ್ಣೆ ಮಸಾಜ್ ಮಾಡುತ್ತೇವೆ. ವರ್ಷದಲ್ಲಿ ಒಮ್ಮೆ ಇದನ್ನು ಮಾಡಿಸಿಕೊಂಡರೆ ಯಾವುದೇ ರೀತಿಯ ಚರ್ಮ ವ್ಯಾಧಿಗಳು ಬರುವುದಿಲ್ಲ. ಅಲ್ಲದೆ ಹೊಸ ಜಾಗದಲ್ಲಿ ವಾರ್ಟ್ಸ್ ಬರದ ಹಾಗೆಯೂ ಚಿಕಿತ್ಸೆ ಇದೆ ಎನ್ನುತ್ತಾರೆ ಅವರು.

### ವಾರ್ಟ್ಸ್ ತಡೆ ಹೇಗೆ?

ಜಂಕ್‌ಫುಡ್, ಕರಿದ ಪದಾರ್ಥಗಳು ವರ್ಜ್ಯ, ಬೆವರು ಬರದ ಹಾಗೆ ನೋಡಿಕೊಳ್ಳಬೇಕು, ಉಪ್ಪಿನಂಶ ಹೆಚ್ಚಿರುವ ಪದಾರ್ಥ ಬೇಡ, ದಿನಾ ಎರಡು ಸಲ ಸ್ನಾನ ಮಾಡಿದರೆ ಒಳ್ಳೆಯದು. ವಾರ್ಟ್ಸ್ ಚಿಕಿತ್ಸೆ ಪಡೆದು ಅದು ಅಳಿಸಿ ಹೋದ ಮೇಲೆಯೂ ಸುಂದರವಾಗಿ ಕಾಣುವುದಕ್ಕಾಗಿ ಹರ್ಬಲ್ ಫೇಷಿಯಲ್ ಮಾಡಿಸಿಕೊಳ್ಳಬಹುದು ಎಂಬುದು ಅವರ ಸಲಹೆ.

ಮನೆ ಮದ್ದು ಕೂಡ ಪರಿಣಾಮಕಾರಿ. ಬೆಳ್ಳುಳ್ಳಿ, ಹರಳೆಣ್ಣೆ, ಲವಂಗ, ಬಾಳೆಹಣ್ಣು, ನಿಂಬೆಹಣ್ಣು, ಸೇಬುಹಣ್ಣಿನ ಎಕ್ಸ್‌ಟ್ರ್ಯಾಕ್ಟ್, ಲೋಳೆಸರದ ಎಕ್ಸ್‌ಟ್ರ್ಯಾಕ್ಟ್‌ಗಳನ್ನು ಬಳಸಿ ವಾರ್ಟ್ಸ್ ಅನ್ನು ಹೋಗಲಾಡಿಸಬಹುದು.

ಒಂದು ಅಭಿಪ್ರಾಯದ ಪ್ರಕಾರ ಮುಖದಲ್ಲಿ ವಾರ್ಟ್ಸ್ ಉಂಟಾಗಲು ಎಚ್‌ಪಿವಿ (ಹ್ಯೂಮನ್ ಪಪಿಲೋಮ ವೈರಸ್) ಕಾರಣ. ನಯವಾದ ತ್ವಚೆಯ ಮೇಲೆ ಈ ವಾರ್ಟ್ಸ್ ಮೂಡಿದರಂತೂ ಅದನ್ನು ಹೋಗಲಾಡಿಸಲು ಹರಸಾಹಸ ಮಾಡ ಬೇಕಾಗುತ್ತದೆ. ಎಲ್ಲ ರೀತಿಯ ಚರ್ಮರೋಗಕ್ಕಿರುವ ಹಾಗೆ ವಾರ್ಟ್ಸ್‌ಗೂ ಈಗ ಉತ್ತಮ ಚಿಕಿತ್ಸೆಗಳಿವೆ. ಮಾನಸಿಕವಾಗಿ ಕುಗ್ಗುವಂತೆ ಮಾಡುವ ಈ ವಾರ್ಟ್ಸ್, ಬೇಗನೆ ಮಾಯವಾಗುವುದಿಲ್ಲ. ಹೀಗಾಗಿ ಅಂದ ಆರೋಗ್ಯ ಎರಡನ್ನೂ ಅಂದಗೆಡಿಸುವ, ಅನಾರೋಗ್ಯಗೊಳಿಸುವ ವಾರ್ಟ್ಸ್ ಒಂದು ಶಾಪವೇ ಸರಿ.

